ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

ಸಂಖ್ಯೆ:ಎಸಿ7/19/2022-23

ದಿನಾಂಕ: 08-12-2022

## ಪರಿಷ್ಕೃತ ಅಧಿಸೂಚನೆ

ವಿಷಯ: ಎಲ್ಲಾ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ 2022-23ನೇ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಇದೇ ಸಮ ಸಂಖ್ಯೆ ಅಧಿಸೂಚನೆ ದಿನಾಂಕ: 28-11-2022.

*****

ಉಲ್ಲೇಖಿತ ಅಧಿಸೂಚನೆಯಲ್ಲಿ, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ ನಿರ್ದೇಶಕರುಗಳು/ ಸಂಯೋಜನಾಧಿಕಾರಿಗಳು ಮಾನಸಗಂಗೋತ್ರಿ, ಮೈಸೂರು/ ಸ್ನಾತಕೋತ್ತರ ಕೇಂದ್ರ, ಮಂಡ್ಯ/ ಹಾಸನ/ ಚಾಮರಾಜನಗರ ಮತ್ತು ಪ್ರಾಂಶುಪಾಲರು/ ಮುಖ್ಯಸ್ಥರು, ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಸ್ನಾತಕೋತ್ತರ ಕೋರ್ಸುಗಳನ್ನು ಬೋಧನೆ ಮಾಡುತ್ತಿರುವ ಘಟಕ ಕಾಲೇಜುಗಳು (ಸ್ನಾತಕೋತ್ತರ) ಇವರುಗಳ ಗಮನಕ್ಕೆ, 2022-23ನೇ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ವರ್ಷದ ಎಲ್ಲಾ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಅರ್ಹ ಅಭ್ಯರ್ಥಿಗಳನ್ನು ಪ್ರವೇಶ ಮಾಡಿಕೊಳ್ಳಲು ನಿಗದಿಪಡಿಸಿದ್ದ ದಿನಾಂಕವನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿದೆ.

| | | |
|---|---|---|
| 1. | ಪ್ರವೇಶಾತಿ ಮಾಡಿಕೊಳ್ಳಲು ಕೊನೆಯ ದಿನಾಂಕ (ದಂಡ ಶುಲ್ಕವಿಲ್ಲದೆ) | ದಿನಾಂಕ: 17-12-2022 |
| 2. | ರೂ.500-00ಗಳ ದಂಡ ಶುಲ್ಕದೊಂದಿಗೆ | ದಿನಾಂಕ: 19-12-2022 ರಿಂದ 26-12-2022 |

ವಿಶೇಷ ಸೂಚನೆ:

1. 'ಎ' ಸ್ಕೀಂ ನಡಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು Government Quota ಎಂದು ಪರಿಗಣಿಸಿ UUCMS Portalನಲ್ಲಿ ವಿದ್ಯಾರ್ಥಿಗಳ ಲಾಗಿನ್ ಮುಖಾಂತರ ಶುಲ್ಕವನ್ನು ಆನ್‌ಲೈನ್/ಆಫ್‌ಲೈನ್ ಮೂಲಕ ಕಡ್ಡಾಯವಾಗಿ ಪಾವತಿಸಿಕೊಳ್ಳುವುದು. (ಆಫ್‌ಲೈನ್‌ನಲ್ಲಿ ಪಾವತಿಸಿದ ವಿದ್ಯಾರ್ಥಿಗಳು ಶುಲ್ಕದ ಚಲನ್‌ನ್ನು ಹಾಗೂ ಪಾವತಿಸಿರುವ ಮೊತ್ತವನ್ನು ವಿದ್ಯಾರ್ಥಿಗಳ ಲಾಗಿನ್ ಮುಖಾಂತರ UUCMS Portalನಲ್ಲಿಯೇ ಚಲನ್ ಸಮೇತ Upload ಮಾಡಿಸುವುದು).
2. 'ಬಿ' ಸ್ಕೀಂ ನಡಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳನ್ನು Management Quota ಎಂದು ಪರಿಗಣಿಸಲಾಗುವುದು. Management Quotaದ ವಿದ್ಯಾರ್ಥಿಗಳು ಎರಡು ಕಂತುಗಳಲ್ಲಿ ಆಫ್‌ಲೈನ್‌ನಲ್ಲಿ ಪಾವತಿಸಿಕೊಳ್ಳುವುದು, ಒಂದು ವೇಳೆ ವಿದ್ಯಾರ್ಥಿಗಳೇ ಪೂರ್ಣ ಶುಲ್ಕವನ್ನು ಪಾವತಿಸಲು ಇಚ್ಚಿಸಿದಲ್ಲಿ ಆನ್‌ಲೈನ್/ಆಫ್‌ಲೈನ್‌ನಲ್ಲಿ ಪಾವತಿಸಿಕೊಂಡು ನಂತರ ಸದರಿ ವಿದ್ಯಾರ್ಥಿಗಳು ಪಾವತಿಸಿದ ಮೊತ್ತದ ಚಲನ್‌ನ್ನು UUCMS Portalನಲ್ಲಿ ವಿದ್ಯಾರ್ಥಿಗಳ ಲಾಗಿನ್ ಮುಖಾಂತರ ಕಡ್ಡಾಯವಾಗಿ Upload ಮಾಡಿಸುವುದು.
3. 'ಎ' ಸ್ಕೀಂ ನಡಿ ಪ್ರವೇಶಾತಿ ಶುಲ್ಕ ರೂ.25,000/-ಗಳಿಗಿಂತ ಹೆಚ್ಚು ಇದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಎರಡು ಕಂತುಗಳಲ್ಲಿ ಪ್ರವೇಶಾತಿ ಶುಲ್ಕವನ್ನು ಆನ್‌ಲೈನ್/ಆಫ್‌ಲೈನ್ ಮೂಲಕ ಕಡ್ಡಾಯವಾಗಿ ಪಾವತಿಸಿಕೊಳ್ಳುವುದು. **(ಆಫ್‌ಲೈನ್‌ನಲ್ಲಿ ಪಾವತಿಸಿದ ವಿದ್ಯಾರ್ಥಿಗಳು ಶುಲ್ಕದ ಚಲನ್‌ನ್ನು ಹಾಗೂ ಪಾವತಿಸಿರುವ ಮೊತ್ತವನ್ನು UUCMS Portalನಲ್ಲಿ ವಿದ್ಯಾರ್ಥಿಗಳ ಲಾಗಿನ್ ಮುಖಾಂತರ UUCMS Portalನಲ್ಲಿಯೇ ಕಡ್ಡಾಯವಾಗಿ Upload ಮಾಡಿಸುವುದು)**
4. 2022-23ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ/ಪಿ.ಜಿ.ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆಯುವ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನವು 2.5 ಲಕ್ಷದ ರೂಗಳಿಗಿಂತ ಒಳಗಿರುವ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯಿಂದ ಮತ್ತು ತಾಲ್ಲೂಕು ಪರಿಶಿಷ್ಟ ವರ್ಗ ಕಲ್ಯಾಣ ಇಲಾಖೆಯಿಂದ ನೀಡುವ ಫ್ರೀಶಿಫ್ ಕಾರ್ಡ್‌ನ್ನು ಪಡೆದು ನಂತರ ಅಧ್ಯಯನ ವಿಭಾಗಗಳಿಗೆ ಸಲ್ಲಿಸಿದಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಮಯದಲ್ಲಿ ಪ್ರವೇಶಾತಿ ಶುಲ್ಕದಿಂದ ವಿನಾಯಿತಿ ನೀಡಿ ಹಾಗೂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರಾದ 7 ದಿನದ ಒಳಗೆ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡುವುದಾಗಿ ಮುಚ್ಚಳಿಕೆ ಬರೆಸಿಕೊಂಡು ಸದರಿ ಮುಚ್ಚಳಿಕೆನ್ನು UUCMSನ Portalನಲ್ಲಿ ಕಡ್ಡಾಯವಾಗಿ Upload ಮಾಡಿಸಿ ಪ್ರವೇಶಾತಿ ನೀಡುವುದು.
5. ಮಾನಸಗಂಗೋತ್ರಿಯ ವಿವಿಧ ಅಧ್ಯಯನ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹಿಂದಿನ ಸಾಲಿನ ಬಾಕಿ ಶುಲ್ಕವನ್ನು ಆಡಳಿತಾಧಿಕಾರಿಗಳ ಕಛೇರಿಯಲ್ಲಿಯೂ ಮಂಡ್ಯ, ಹಾಸನ ಮತ್ತು ಚಾಮರಾಜನಗರ ಸ್ನಾತಕೋತ್ತರ ಕೇಂದ್ರದಲ್ಲಿನ ವಿದ್ಯಾರ್ಥಿಗಳು ಆಯಾಯ ಕೇಂದ್ರದ ಕಛೇರಿಯಲ್ಲಿಯೂ, ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಕಾಲೇಜುಗಳ ಸ್ನಾತಕೋತ್ತರ ವಿದ್ಯಾರ್ಥಿಗಳು ಸಂಬಂಧಿಸಿದ ಘಟಕ ಕಾಲೇಜುಗಳಲ್ಲಿಯೂ ಶುಲ್ಕ ಪಾವತಿಸತಕ್ಕದ್ದು.
6. **Re-admission, Re-Registration ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕಟ್ಟುನಿಟ್ಟಾಗಿ CBCS Regulation 5.1ರ ರೀತ್ಯಾ ಹಾಗೂ Fee Structure Notification ಸಂಖ್ಯೆ: ಎಸಿ2(ಎಸ್)/18/2022-23, ದಿನಾಂಕ: 19-11-2022ರ ಪ್ರಕಾರ ದಾಖಲೆಗಳನ್ನು ಪರಿಶೀಲಿಸಿ Double the Duration ಅವಧಿಯೊಳಗಿರುವಂತಹ ವಿದ್ಯಾರ್ಥಿಗಳಿಗೆ ನಿಗಧಿಪಡಿಸಿರುವ ಶುಲ್ಕವನ್ನು ಸಂಗ್ರಹಿಸಿ ನಿಮ್ಮ ಹತಿಯಿಂದಲೆ ಪ್ರವೇಶವನ್ನು ಕಲ್ಪಿಸಿಕೊಡಲು ಕ್ರಮ ಕೈಗೊಳ್ಳಲು ತಿಳಿಸಿದೆ.**

ಪು.ತಿ.ನೋ.

CS Scanned with CamScanner

7. ICCR ವಿದೇಶಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ, ICCRನಿಂದ ನೇರವಾಗಿ ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ಕೇಂದ್ರಕ್ಕೆ ಶುಲ್ಕ ಪಾವತಿಸುವುದರಿಂದ, ಸದರಿ ಕಛೇರಿಯಿಂದ ಪಡೆದ ಪತ್ರವನ್ನು ಚಲನ್ ಎಂದು ಪರಿಗಣಿಸಿ ಸದರಿ ವಿದ್ಯಾರ್ಥಿಗಳ ಲಾಗಿನ್ ಮುಖಾಂತರ UUCMSನ Portalನಲ್ಲಿ Upload ಮಾಡಿಸುವುದು.
8. ಅಂತಿಮ ದಿನಾಂಕದ ನಂತರ ಪ್ರವೇಶಾತಿಗಳನ್ನು ಮಾಡಿಕೊಳ್ಳಬಾರದು.
9. ಯಾವುದೇ ಕಾರಣದಿಂದ ಮೇಲಿನ ದಿನಾಂಕಗಳಲ್ಲಿ ರಜೆ ಎಂದು ಘೋಷಿಸಿದಲ್ಲಿ, ಅನ್ವಯಿಸುವ ದಿನಾಂಕಗಳನ್ನು ಮುಂದಿನ ಕೆಲಸದ ದಿನಾಂಕವೆಂದು ಪರಿಗಣಿಸುವುದು.

8/12/2022

ಕುಲಸಚಿವ

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ

ಇವರಿಗೆ:

1. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ನಿರ್ದೇಶಕರುಗಳು/ಸಂಯೋಜನಾಧಿಕಾರಿಗಳು/ಮುಖ್ಯಸ್ಥರು, ಮಾನಸಗಂಗೋತ್ರಿ, ಮೈಸೂರು/ಸ್ನಾತಕೋತ್ತರ ಕೇಂದ್ರ, ಹಾಸನ/ಸ್ನಾತಕೋತ್ತರ ಕೇಂದ್ರ, ಮಂಡ್ಯ /ಡಾ.ಬಿ.ಆರ್.ಅಂಬೇಡ್ಕರ್, ಸ್ನಾತಕೋತ್ತರ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಚಾಮರಾಜನಗರ.
2. ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಕುಲಸಚಿವರು (ಪರೀಕ್ಷಾಂಗ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ., ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಪ್ರೊ.ಎಂ.ಎ.ಶ್ರೀಧರ್, ಅಧ್ಯಕ್ಷರು, Admission Reformation, Regulation & Implementation Committee, ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
6. ನಿರ್ದೇಶಕರು, ಐ.ಸಿ.ಡಿ ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು– ಸದರಿ ಪರಿಷ್ಕೃತ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
7. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಆಡಳಿತಾಧಿಕಾರಿಗಳು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು.
9. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮೈಸೂರು.
10. ನಿರ್ದೇಶಕರು, ಇಂಟರ್ ನ್ಯಾಷನಲ್ ಸೆಂಟರ್, ವಿವಿ ಲಲಿತಕಲೆಗಳ ಕಾಲೇಜು ಆವರಣ, ಮಾ.ಗಂ., ಮೈಸೂರು.
11. Director Internal Quality Assurance Cell NCHS Building, M.G.Mysore.
12. ಎಲ್ಲಾ ಉಪ ಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
13. ಉಪ ಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು(ಆಡಳಿತ ವಿಭಾಗ) ಮತ್ತು (ಪರೀಕ್ಷಾಂಗ ವಿಭಾಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
14. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
15. ಕಛೇರಿ ಪ್ರತಿ.

SI/AC7

CS Scanned with CamScanner